UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
28-07-2026
Tuesday

ಅಕ್ಟೋಬರ್‌ನಲ್ಲಿ ಆಯೋಜಿಸಿದ್ದ ಕೃಷಿ ವಿವಿ ಮೇಳ ಮುಂದೂಡಿಕೆ

ಸಂ.ಕ. ಸಮಾಚಾರ ಬೆಂಗಳೂರು

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ವತಿಯಿಂದ ಆಯೋಜಿಸಲಾಗುವ ಪ್ರಸಕ್ತ ಸಾಲಿನ ಕೃಷಿಮೇಳವನ್ನು ಮುಂದೂಡಲಾಗಿದೆ.

ಈ ಹಿಂದೆ ಅಕ್ಟೋಬರ್ 15 ರಿಂದ 18 ರವರೆಗೆ ಕೃಷಿಮೇಳವನ್ನು ನಡೆಸಲು ತೀರ್ಮಾನಿಸಲಾಗಿತ್ತು. ಆದರೆ, ಪ್ರಸ್ತುತ ರಾಜ್ಯದಲ್ಲಿ ಕಂಡುಬಂದಿರುವ ಮುಂಗಾರು ಮಳೆಯ ಹಿನ್ನಡೆ ಹಾಗೂ ಮುಂಬರುವ ದಿನಗಳಲ್ಲಿ ಮಳೆಯಾಗುವ ನಿರೀಕ್ಷೆ ಇರುವುದರಿಂದ ವಿಶ್ವವಿದ್ಯಾನಿಲಯವು ಈ ಕೃಷಿಮೇಳವನ್ನು ನವೆಂಬರ್‌ಗೆ ಮುಂದೂಡುವ ಮಹತ್ವದ ನಿರ್ಣಯವನ್ನು ಕೈಗೊಂಡಿದ್ದು ಕೃಷಿ ಮೇಳವು ನವೆಂಬರ್ 12 ರಿಂದ 15 ರವರೆಗೆ ಆಯೋಜಿಸಲು ನಿರ್ಧರಿಸಲಾಗಿದೆ.

ಮೇಳದಲ್ಲಿ ಮಳಿಗೆಗಳನ್ನು ಕಾಯ್ದಿರಿಸಲು ಕೊನೆಯ ದಿನಾಂಕವನ್ನು 2026ರ ಅಕ್ಟೋಬರ್ 19 ರವರೆಗೆ ವಿಸ್ತರಿಸಲಾಗಿದೆ. ವಿವಿಧ ಪ್ರಶಸ್ತಿಗಳಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

ಈ ಬಾರಿಯ ಕೃಷಿಮೇಳವನ್ನು ಮುಂದಿನ ಪೀಳಿಗೆಗೆ ವೈವಿಧ್ಯಮಯ ಕೃಷಿ ಎಂಬ ವಿಶೇಷ ಶೀರ್ಷಿಕೆಯಡಿಯಲ್ಲಿ ಆಚರಿಸಲಾಗುತ್ತಿದೆ. ಕೃಷಿ ಮೇಳದಲ್ಲಿ ಕೃಷಿ ಕ್ಷೇತ್ರದ ಭವಿಷ್ಯದ ಸಾಧ್ಯತೆಗಳು ಹಾಗೂ ಹವಾಮಾನ ವೈಪರೀತ್ಯ ಮತ್ತು ಬದಲಾವಣೆಗೆ ತಕ್ಕಂತೆ ಹೊಂದಿಕೊಳ್ಳುವ ಕೃಷಿ ಚಟುವಟಿಕೆಗಳಿಗೆ ಹೆಚ್ಚಿನ ಒತ್ತು ನೀಡಲಾಗುವುದು ಎಂದು ಕೃಷಿ ವಿಶ್ವವಿದ್ಯಾನಿಲಯದ ಪ್ರಕಟಣೆ ತಿಳಿಸಿದೆ.

Samyuktha Karnataka Pg.02

ಕೃಷಿಮೇಳ ಮುಂದೂಡಿಕೆ

• **ಬೆಂಗಳೂರು:** ಕೃಷಿ ವಿಶ್ವವಿದ್ಯಾನಿಲಯದ 2026ರ ಕೃಷಿಮೇಳವನ್ನು ನ.12 ರಿಂದ 15 ರವರೆಗೆ ಮುಂದೂಡಲಾಗಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಾರ್ಷಿಕ 2026ರ ಕೃಷಿಮೇಳ ಈ ಮೊದಲು, ಅಕ್ಟೋಬರ್ 15 ರಿಂದ 18ರವರೆಗೆ ಆಯೋಜಿಸಲು ತೀರ್ಮಾನಿಸಲಾಗಿತ್ತು. ಪ್ರಸ್ತುತ ರಾಜ್ಯದಲ್ಲಿ ಕಂಡುಬಂದಿರುವ ಮುಂಗಾರಿನ ಹಿನ್ನಡೆ ಹಾಗೂ ಮುಂಬರುವ ದಿನಗಳಲ್ಲಿ ಮಳೆಯ ನಿರೀಕ್ಷೆಯ ಹಿನ್ನೆಲೆಯಲ್ಲಿ, ಕೃಷಿಮೇಳವನ್ನು ನವೆಂಬರ್ 12 ರಿಂದ 15ರವರೆಗೆ ಮುಂದೂಡಲು ವಿಶ್ವವಿದ್ಯಾನಿಲಯ ನಿರ್ಣಯವನ್ನು ಕೈಗೊಂಡಿದೆ. ಅದೇರೀತಿ ಕೃಷಿ ಮೇಳಕ್ಕೆ ಮಳಿಗೆಗಳನ್ನು ಕಾಯ್ದಿರಿಸುವ ಕೊನೆಯ ದಿನಾಂಕವನ್ನೂ ಅ.19 ರವರೆಗೆ ವಿಸ್ತರಿಸಲಾಗಿದೆ. ವಿವಿಧ ಪ್ರಶಸ್ತಿಗಳಿಗೆ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ, ಈ ಬಾರಿ ಕೃಷಿಮೇಳವನ್ನು ಮುಂದಿನ ಪೀಳಿಗೆಗೆ ವೈವಿಧ್ಯಮಯ ಕೃಷಿ ಶೀರ್ಷಿಕೆಯಡಿಯಲ್ಲಿ ಆಚರಿಸಲು ಉದ್ದೇಶಿಸಲಾಗಿದ್ದು, ಈ ಮೇಳದಲ್ಲಿ ವಿ.ವಿ. ಕೃಷಿ ಕ್ಷೇತ್ರದ ಭವಿಷ್ಯದ ಸಾಧ್ಯತೆಗಳನ್ನು, ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವ ಕೃಷಿ ಚಟುವಟಿಕೆಗಳಿಗೆ ಒತ್ತು ನೀಡುವ ಪ್ರಯತ್ನ ಕೈಗೊಳ್ಳಲಾಗುವುದು ಎಂದು ಕೃಷಿ ವಿವಿ ಪ್ರಕಟಣೆಯಲ್ಲಿ ತಿಳಿಸಿದೆ.

Hosadiganta Pg.08

ಕೃಷಿ ಮೇಳ ನವೆಂಬರ್‌ಗೆ ಮುಂದೂಡಿಕೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ನಡೆಸಲು ಉದ್ದೇಶಿಸಿದ್ದ ಕೃಷಿ ಮೇಳ-2026 ಅನ್ನು ಮುಂದೂಡಿದ್ದು, ಹೊಸ ದಿನಾಂಕವನ್ನು ಪ್ರಕಟಿಸಲಾಗಿದೆ. ಈ ಮೊದಲು ಅಕ್ಟೋಬರ್ 15ರಿಂದ 18ರವರೆಗೆ ನಾಲ್ಕು ದಿನಗಳ ಕಾಲ ಮೇಳವನ್ನು ಆಯೋಜಿಸಲಾಗಿತ್ತು. ಆದರೆ, ಮುಂಗಾರು ಮಳೆಯ ಹಿನ್ನೆಡೆ ಹಾಗೂ ಮಳೆ ಇಲ್ಲದೆ ಬರ ಆವರಿಸಿಕೊಳ್ಳುವ ಸಾಧ್ಯತೆ ಇರುವುದರಿಂದ ಮೇಳವನ್ನು ಮುಂದಕ್ಕೆ ಹಾಕಲಾಗಿದೆ. ಇದೀಗ ಕೃಷಿ ವಿವಿಯ ಕುಲಪತಿಯವರು ಸಭೆ ನಡೆಸಿ ಹೊಸ ದಿನಾಂಕವನ್ನು ನಿಗದಿ ಮಾಡಿದ್ದಾರೆ. ಇದರನ್ವಯ ನ.12ರಿಂದ 15ರವರೆಗೆ ಮೇಳವು ನಡೆಯಲಿದೆ. ಮೇಳಕ್ಕೆ ಮಳಿಗೆಗಳನ್ನು ಕಾಯ್ದಿರಿಸುವ ಕೊನೆಯ ದಿನಾಂಕವನ್ನು ಅಕ್ಟೋಬರ್ 19ರವರೆಗೆ ವಿಸ್ತರಿಸಲಾಗಿದೆ. ವಿವಿಧ ಪ್ರಶಸ್ತಿಗಳಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ವಿವಿಯ ವಿಸ್ತರಣಾ ನಿರ್ದೇಶಕರು ತಿಳಿಸಿದ್ದಾರೆ.

■ ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಹೊಸ ದಿನಾಂಕ ನಿಗದಿ

Vijayavani Pg.3c

ಅ.15ರಿಂದ ನಡೆಯಬೇಕಿದ್ದ ಜಿಕೆವಿಕೆ ಕೃಷಿ ಮೇಳ ನವೆಂಬರ್ ಮಾಸಕ್ಕೆ ಮುಂದೂಡಿಕೆ

ರಾಜ್ಯದಲ್ಲಿ ಮುಂಗಾರು ಮಳೆ ಅಭಾವ ಹಿನ್ನೆಲೆಯಲ್ಲಿ ಮೇಳ ಮುಂದಕ್ಕೆ

■ ಉದಯವಾಣಿ ಸಮಾಚಾರ

ಬೆಂಗಳೂರು: ರಾಜ್ಯಾದ್ಯಂತ ಮುಂಗಾರು ಮಳೆಯ ಅಭಾವ ಎದುರಾಗಿ ಕೃಷಿ ಚಟುವಟಿಕೆಗೆ ಹಿನ್ನಡೆಯಾಗಿದ್ದು ಮಳೆ ನಿರೀಕ್ಷೆ ಹಿನ್ನೆಲೆಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಜಿಕೆವಿಕೆಯಲ್ಲಿ ಆಯೋಜಿಸುವ ಈ ಬಾರಿಯ 'ಕೃಷಿ ಮೇಳ-2026' ವನ್ನು ನವೆಂಬರ್ 2ನೇ ವಾರಕ್ಕೆ ಮುಂದೂಡಿದೆ.



ಈ ಬಾರಿಯ ಕೃಷಿ ಮೇಳವನ್ನು 'ಮುಂದಿನ ಪೀಳಿಗೆಗೆ ವೈವಿಧ್ಯಮಯ ಕೃಷಿ' ಶೀರ್ಷಿಕೆಯಡಿ ಅಕ್ಟೋಬರ್ 15 ರಿಂದ 18 ರವರೆಗೆ ಆಯೋಜಿಸಲು ತೀರ್ಮಾನಿಸಲಾಗಿತ್ತು. ಆದರೆ, ಹವಾಮಾನ ವೈಪರೀತ್ಯದಿಂದಾಗಿ ಮುಂಗಾರು ಮಳೆ ಹಿನ್ನಡೆಯಾಗಿದೆ. ಮೇಳದಲ್ಲಿ ನಿರೀಕ್ಷೆಯಂತೆ ವೈವಿಧ್ಯಮಯ ತಳಿ, ಬೆಳೆಗಳ ನೈಜ ಪ್ರದರ್ಶನ ಸವಾಲಾಗುವ ಸಾಧ್ಯತೆ ಇದೆ. ಈ ಉದ್ದೇಶದಿಂದ ಮಳೆ ನಿರೀಕ್ಷೆಯೊಂದಿಗೆ ಕೃಷಿ ಮೇಳವನ್ನು ನವೆಂಬರ್12 ರಿಂದ 15 ರ ಅವಧಿಯಲ್ಲಿ ಆಯೋಜಿಸಲು ವಿಶ್ವವಿದ್ಯಾಲಯ ತೀರ್ಮಾನಿಸಿದೆ. ಇದರೊಂದಿಗೆ ಕೃಷಿ ಮೇಳಕ್ಕೆ ಮಳಿಗೆಗಳನ್ನು ಕಾಯ್ದಿರಿಸುವ ದಿನಾಂಕವನ್ನು ಅಕ್ಟೋಬರ್ 19 ರವರೆಗೆ ವಿಸ್ತರಿಸಿದೆ. ಆದರೆ, ವಿವಿಧ ಪ್ರಶಸ್ತಿಗಳಿಗೆ ಸಲ್ಲಿಕೆಯಾಗುವ ಅರ್ಜಿ ದಿನಾಂಕದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ತಿಳಿಸಿದೆ.

ಪರ್ಯಾಯ ಬೆಳೆ ಪ್ರದರ್ಶನಕ್ಕೆ ಚಿಂತನೆ: ರಾಜ್ಯದಲ್ಲಿ ಆಗಸ್ಟ್ 15 ರ ಒಳಗಾಗಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದಿದ್ದರೆ, ಕೃಷಿ ಮೇಳದಲ್ಲಿ ಸಾಂಪ್ರದಾಯಿಕ ಬೆಳೆಗಳ ಬದಲಾಗಿ ಅಲ್ಪಾವಧಿ ಪರ್ಯಾಯ ಬೆಳೆಯನ್ನು ಪ್ರದರ್ಶಿಸಲು ಉದ್ದೇಶಿಸಲಾಗಿದೆ. ಅಲ್ಲದೇ ಮೇಳದಲ್ಲಿ ಕೇವಲ ನೂತನ ತಳಿಗಳ ಪ್ರದರ್ಶನಕ್ಕೆ ಸೀಮಿತಗೊಳಿಸದೆ ಬರ ನಿರ್ವಹಣೆ, ನೀರಿನ ಬಳಕೆ ಹಾಗೂ ಮಣ್ಣಿನ ಫಲವತ್ತತೆ ಹೆಚ್ಚಿಸುವ ಕ್ರಮಗಳ ಕುರಿತು ವಿಷಯವನ್ನು ಆದ್ಯತೆಯಾಗಿಸಿಕೊಂಡು ಕೃಷಿಕರಿಗೆ ನೆರವಾಗುವಂತೆ ಮೇಳವನ್ನು ಆಯೋಜಿಸಲಾಗುವುದು ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ಪಿ.ಸುರೇಶ್ ತಿಳಿಸಿದರು.

Udayavani Pg.02

ಅನ್ಯರಿಗೆ ಕೃಷಿ ಅಧಿಕಾರಿ ಹುದ್ದೆ ಖಂಡಿಸಿ ಪ್ರತಿಭಟನೆ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೊರಡಿಸಿರುವ ಕೃಷಿ ಅಧಿಕಾರಿ (ಎಒ) ಮತ್ತು ಸಹಾಯಕ ಕೃಷಿ ಅಧಿಕಾರಿ(ಎಎಒ) ಹುದ್ದೆಗಳ ನೇಮಕಾತಿ ಅಧಿಸೂಚನೆಯಲ್ಲಿ ಕೃಷಿಯೇತರ ಪದವೀಧರರಿಗೆ ಅವಕಾಶ ಕಲ್ಪಿಸಿರುವುದನ್ನು ವಿರೋಧಿಸಿ ಜಿಕೆವಿಕೆಯಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ಎಒ ಮತ್ತು ಎಎಒ ಹುದ್ದೆಗಳ ನೇಮಕಾತಿಯಲ್ಲಿ ಐಸಿಎಆರ್ ಮಾನ್ಯತೆ ಇಲ್ಲದ ಕಾಲೇಜುಗಳಲ್ಲಿ ಅಭ್ಯಾಸ ಮಾಡಿರುವವರೂ ಅರ್ಜಿ ಸಲ್ಲಿಸಲು ಅವಕಾಶ ನೀಡಿರುವುದು ಸರಿಯಲ್ಲ. ಜೊತೆಗೆ, ಕೃಷಿಯೇತರ ಕೋರ್ಸ್‌ಗಳಾದ ಬಿ.ಇ.ಬಯೋಟೆಕ್ನಿಕ್ ಪದವೀಧರರನ್ನೂ ಪರಿಗಣಿಸಬಾರದು ಎಂದು ಪ್ರತಿಭಟನಾಕಾರರು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

Kannadaprabha Pg.02

ಅನುಸೂಚಿತ ಜಾತಿ ಉಪಯೋಜನೆ ಅಡಿಯಲ್ಲಿ 30 ರೈತರಿಗೆ ತರಬೇತಿ

ತೊಗರಿ ಬೆಳೆ ಕುರಿತು ತರಬೇತಿ



ದೊಡ್ಡಬಳ್ಳಾಪುರ: ಅ.ಭಾ.ಸು. ಮುಂಗಾರು ದ್ವಿದಳ ಧಾನ್ಯ (ತೊಗರಿ) ಸಂಶೋಧನಾ ಪ್ರಯೋಜನೆ, ಕೃಷಿ ವಿಶ್ವ ವಿದ್ಯಾನಿಲಯ ಬೆಂಗಳೂರು ಇವರು ಕೃಷಿ ವಿಜ್ಞಾನ ಕೇಂದ್ರ ಹಾದೋಣಹಳ್ಳಿ ಮತ್ತು ನಬಾರ್ಡ್ ಜಲಾನಯನ ಅಭಿವೃದ್ಧಿ ಯೋಜನೆ? ಭಾರತೀಯ ಸಮಗ್ರ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಇವರ ಸಹಯೋಗದೊಂದಿಗೆ ತಾಲೂಕಿನ ರಾಜಘಟ್ಟ ಗ್ರಾಮದಲ್ಲಿ ಅನುಸೂಚಿತ ಜಾತಿ ಉಪಯೋಜನೆ ಅಡಿಯಲ್ಲಿ 30 ಜನ ರೈತರಿಗೆ ಕೃಷಿ ಪ್ರಗತಿ ಕಾರ್ಯಕ್ರಮದ ಅಂಗವಾಗಿ ತೊಗರಿಯ ಸಮಗ್ರ ಬೆಳೆ ನಿರ್ವಹಣೆ ಕುರಿತು ಒಂದು ದಿನದ ತರಬೇತಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ತೊಗರಿ ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ.ಎಚ್.ಸಿ.ಲೋಹಿತಾಶ್ವ ಮಾತನಾಡಿ, ಈ ಕಾರ್ಯಕ್ರಮದ ಸದ್ಬಳಕೆಮಾಡಿಕೊಂಡು ನಮ್ಮ ದೇಶವನ್ನು ಬೇಳೆಕಾಳು ಬೆಳೆಗಳಲ್ಲಿ ಆತ್ಮನಿರ್ಭರ ಮಾಡುವುದರ ಜತೆಗೆ ಲಾಭದಾಯಕ ಕೃಷಿಯಿಂದ ತಮ್ಮ ಜೀವನಮಟ್ಟ ಸುಧಾರಿಸಿಕೊಂಡು ಇತರೆ ರೈತರಿಗೆ ಮಾದರಿಯಾಗಬೇಕೆಂದು ಕರೆ ನೀಡಿದರು.

ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥ ಡಾ. ಹನುಮಂತರಾಯ ಮಾತನಾಡಿ, ರೈತರ ಸೇವೆ ಮತ್ತು ಕೃಷಿ ಅಭಿವೃದ್ಧಿಗೆ ಶ್ರಮಿಸುತ್ತಿರುವ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳ ಮಾರ್ಗದರ್ಶನ ಯಾವಾಗಲೂ ಸಿದ್ಧ, ರೈತರು ಮುಂದೆ ಬಂದು ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು. ನಬಾರ್ಡ್-ಐಆರ್‌ಐಡಿಎಸ್ ಯೋಜನಾಧಿಕಾರಿ ಮಂಜುನಾಥ ಪಟೇಲ್, ತಮ್ಮ ತಂಡ ಗ್ರಾಮದಲ್ಲಿ ರೈತ ಅಭಿವೃದ್ಧಿಗೆ ಶ್ರಮಿಸುತ್ತಿದ್ದು ಈ ಕಾರ್ಯಕ್ರಮಕ್ಕೆ ಸಂಪೂರ್ಣ ಸಹಕಾರ ನೀಡುತ್ತಿದ್ದು ಈ ಕಾರ್ಯಕ್ರಮದಿಂದ ಉತ್ತಮ ಫಲಿತಾಂಶ ಸಿಗಲಿದೆಯೆಂದು ತಿಳಿಸಿದರು. ತರಬೇತಿಯಲ್ಲಿ ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳಾದ ಡಾ.ಅತೀಕ್ ಉರ್ ರೆಹಮಾನ್, ಡಾ.ಕೇಶವರೆಡ್ಡಿ, ಡಾ. ಮಂಜುನಾಥ, ಡಾ.ದೇವರಾಜು ಮತ್ತು ಡಾ.ನಿಂಗರಾಜು ತಾಂತ್ರಿಕ ಮಾಹಿತಿ ನೀಡಿದರು. ನಬಾರ್ಡ್-ಐಆರ್‌ಐಡಿಎಸ್ ನ ವೆಂಕಟಾಚಲಪತಿ, ಶಾಂತರಾಜು, ನಾಗರಾಜು, ಜಲಜಾಕ್ಷಿ ಮತ್ತು ಅಂಜಿನಪ್ಪ, ರಾಜಘಟ್ಟ ಮತ್ತು ಸುತ್ತಮುತ್ತಲಿನ ಗ್ರಾಮದ ರೈತ ಮತ್ತು ರೈತಮಹಿಳೆಯರು ಇದ್ದರು.

ಬಿತ್ತನೆ ಬೀಜ, ಜೈವಿಕ ಗೊಬ್ಬರ ವಿತರಣೆ

ವಿಶೇಷವಾಗಿ ಬೀಜೋಪಚಾರ ವಿಧಾನ ಮತ್ತು ಸಣ್ಣ ಹಿಡುವಳಿಗೆ ಸುಧಾರಿತ ಕುಂಟೆಯ (ವೀಡರ್) ಬಗ್ಗೆ ಪ್ರಾತ್ಯಕ್ಷಿಕೆ ಮುಖಾಂತರ ತೋರಿಸಲಾಯಿತು. ಜತೆಗೆ ಪೂರಕ ಪರಿಕರಗಳಾದ ಸುಧಾರಿತ ತಳಿಯ ಬಿತ್ತನೆ ಬೀಜ, ದ್ವಿದಳ ಧಾನ್ಯಗಳಿಗೆ ಸೂಕ್ತ ಜೈವಿಕ ಗೊಬ್ಬರ, ಕಳೆ/ಕೀಟನಾಶಕ ಮತ್ತು ಸುಧಾರಿತ ಕುಂಟೆಗಳನ್ನು ಆಯ್ದ ರೈತರಿಗೆ ವಿತರಿಸಲಾಯಿತು.

Hosadiganta Pg.14

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ನ್ಯಾಕ್ ಎ' ಮಾನ್ಯತೆ, ಆಸ್ತಿ ಅಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ

ಸಂ:ಇ.ಒ/ಎಸ್.ಪಿ.ಒ/ಇ-ಪ್ರೋಕ್ಯೂರ್‌ಮೆಂಟ್/6/2026-27 ದಿನಾಂಕ: 24-07-2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಜಿಕೆವಿಕೆ, ಬೆಂಗಳೂರು, ಅವಶ್ಯವಿರುವ ಉಪಕರಣಗಳನ್ನು ಸರಬರಾಜು ಮಾಡಲು ಕೆ.ಜಿ-1, **ಟೆಂಡರ್** ನಿಬಂದನೆ-ಗೊಳಪಟ್ಟಂತೆ **ಟೆಂಡರನ್ನು ಆಹ್ವಾನಿಸಲಾಗಿದೆ. ವಿವರ: ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 05-08-2026 ಸಂಜೆ 4.00 ಘಂಟೆಯವರೆಗೆ ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 07-08-2026 ಸಮಯ ಬೆಳಗ್ಗೆ 10.30 ಕ್ಕೆ, ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 10-08-2026 ಸಮಯ ಬೆಳಗ್ಗೆ 10.30 ಕ್ಕೆ.** ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಪ್ರಕಟಣೆಯ ವಿವರಗಳು ವೆಬ್ ಸೈಟ್: **kppp.karnataka.gov.in**ರಲ್ಲಿ ದೊರೆಯುತ್ತದೆ ಹಾಗೂ ಈ ಕಛೇರಿಯನ್ನು, ಕಛೇರಿಯ ವೇಳೆಯಲ್ಲಿ ಸಹಾಯವಾಣಿ ದೂರವಾಣಿ ಸಂಖ್ಯೆ **09240214000/09240214001 support@eprochelpdesk.com.**

ಸಹಿ/-
ಆಸ್ತಿ ಅಧಿಕಾರಿಗಳು

DIPR/CP/RO1844/AAPL/2026-27

Prajavani Pg.05

ಮಸಾಲೆ ಪದಾರ್ಥಗಳ ಬೆಲೆಯೂ ದುಬಾರಿ

ಗ್ರಾಹಕರು ಅಗತ್ಯಕ್ಕಿಂತ ಕಡಿಮೆ ಪ್ರಮಾಣ ಖರೀದಿಸುವ ಪರಿಸ್ಥಿತಿ ನಿರ್ಮಾಣ | ಆಹಾರ ಉತ್ಪಾದನಾ ಕ್ಷೇತ್ರಕ್ಕೆ ಸಂಕಷ್ಟ

ಸಂ.ಕ. ಸಮಾಚಾರ ಬೆಂಗಳೂರು

ಅಗತ್ಯ ಆಹಾರ ಪದಾರ್ಥಗಳ ಬೆಲೆ ಏರಿಕೆಯಿಂದ ಈಗಾಗಲೇ ಸಂಕಷ್ಟದಲ್ಲಿರುವ ಜನತೆ ಈಗ ಮಸಾಲೆ ಪದಾರ್ಥಗಳ ಬೆಲೆ ಏರಿಕೆಯನ್ನು ತಡೆದುಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿದೆ.

ಅಕ್ಕಿ, ತುಪ್ಪ ಸೇರಿದಂತೆ ಹಲವು ದಿನಸಿ ವಸ್ತುಗಳ ಬೆಲೆ ಹೆಚ್ಚಳದ ಬೆನ್ನಲ್ಲೇ ಇದೀಗ ಅಡುಗೆಗೆ ಅವಿಭಾಜ್ಯವಾಗಿರುವ ಮಸಾಲೆ ಪದಾರ್ಥಗಳ ದರವೂ ಏರಿಕೆಯಾಗಿದೆ. ಇದರಿಂದ ಮನೆಯ ಮಾಸಿಕ ಬಜೆಟ್ ಮತ್ತಷ್ಟು ದುಬಾರಿಯಾಗಿದ್ದು, ಮಧ್ಯಮ ವರ್ಗದ ಕುಟುಂಬಗಳ ಮೇಲೆ ಹೆಚ್ಚುವರಿ ಹೊರೆ ಬಿದ್ದಿದೆ. ಮೆಣಸಿನಕಾಯಿ, ಜೀರಿಗೆ, ಧನಿಯಾ, ಮೆಂತೆ, ಸಾಸಿವೆ, ಚಕ್ಕೆ, ಲವಂಗ, ಏಲಕ್ಕಿ ಸೇರಿದಂತೆ ಬಹುತೇಕ ಪ್ರಮುಖ ಮಸಾಲೆ ಪದಾರ್ಥಗಳ ದರ ಕಳೆದ ಕೆಲವು ವಾರಗಳಲ್ಲಿ ಗಣನೀಯವಾಗಿ ಏರಿಕೆಯಾಗಿದೆ. ಅಡುಗೆಯ ರುಚಿ ಮತ್ತು ಸುವಾಸನೆ ಹೆಚ್ಚಿಸುವ ಈ ವಸ್ತುಗಳ ಬೆಲೆ ಹೆಚ್ಚಳದಿಂದ ಮನೆ ಬಳಕೆದಾರರ ಜೊತೆಗೆ ಹೋಟೆಲ್, ಬೇಕರಿ ಹಾಗೂ ಆಹಾರ ಉತ್ಪಾದನಾ ಕ್ಷೇತ್ರವೂ ಸಂಕಷ್ಟ ಎದುರಿಸುತ್ತಿದೆ.

ಹೋಟೆಲ್ ಉದ್ಯಮದ ಮೇಲೂ ಪರಿಣಾಮ; ಹೋಟೆಲ್ ಹಾಗೂ ಬೇಕರಿ ಉದ್ಯಮದಲ್ಲೂ ಉತ್ಪಾದನಾ ವೆಚ್ಚ ಹೆಚ್ಚಳ ಕಂಡುಬಂದಿದ್ದು, ಹಲವು ಆಹಾರ ಪದಾರ್ಥಗಳ ತಯಾರಿಕೆ ವೆಚ್ಚದ ಮೇಲೂ ಪರಿಣಾಮ ಬೀರಿದೆ. ಬೆಲೆ ಏರಿಕೆಯ ಒತ್ತಡ ಮುಂದುವರಿದರೆ ಮುಂದಿನ ದಿನಗಳಲ್ಲಿ ತಿನಿಸುಗಳ ದರವೂ ಹೆಚ್ಚುವ ಸಾಧ್ಯತೆ ಇದೆ ಎಂಬ ಆತಂಕ ವ್ಯಾಪಾರಿಗಳಲ್ಲಿದೆ. ಗತ್ತ ದಿನಸಿ ವಸ್ತುಗಳ ಬೆಲೆ ಏರಿಕೆಯ ಸರಣಿಗೆ ಈಗ ಮಸಾಲೆ ಪದಾರ್ಥಗಳೂ ಸೇರ್ಪಡೆಯಾಗಿವೆ. ಅಡುಗೆ ಮನೆಯ ಸುವಾಸನೆಗೆ ಈಗ ಗ್ರಾಹಕರು ಹೆಚ್ಚುವರಿ ಬೆಲೆ ತೆರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳ ಮಾಸಿಕ ವೆಚ್ಚದ ಮೇಲೆ ಇದರ ನೇರ ಪರಿಣಾಮ ಬೀಳುತ್ತಿದೆ.

ಪದಾರ್ಥಗಳು	ಹಳೆ ದರ	ಹೊಸ ದರ (ಪ್ರತಿ ಕೆ.ಜಿ.ಗೆ)
ಏಲಕ್ಕಿ	3800	4300
ಬಾದಾಮಿ	800	1000
ಸಾಸಿವೆ	80	100
ಮೆಂತೆ ಕಾಳು	80	100
ಧನಿಯಾ	160	220
ಹುಣಸೆಹಣ್ಣು	140	170
ಒಣ ಮೆಣಸಿನಕಾಯಿ	230	320
ಜೀರಿಗೆ	160	260
ಲವಂಗ	600	900
ಚಕ್ಕೆ	170	240

ಬೆಲೆ ಏರಿಕೆಗೆ ಕಾರಣವೇನು?

ವ್ಯಾಪಾರಿಗಳ ಪ್ರಕಾರ, ಸಾಗಾಣಿಕೆ ವೆಚ್ಚ ಏರಿಕೆ, ಕೆಲವು ಮಸಾಲೆ ಬೆಳೆಗಳ ಉತ್ಪಾದನೆ ಕುಸಿತ ಹಾಗೂ ಮಾರುಕಟ್ಟೆಯಲ್ಲಿ ಲಭ್ಯತೆ ಕಡಿಮೆಯಾಗಿರುವುದು ದರ ಏರಿಕೆಗೆ ಪ್ರಮುಖ ಕಾರಣವಾಗಿದೆ. ಪರಿಣಾಮವಾಗಿ ಚಿಲ್ಲರೆ ಮಾರುಕಟ್ಟೆಯಲ್ಲೂ ಬೆಲೆ ಏರಿಕೆಯಾಗಿದ್ದು, ಗ್ರಾಹಕರು ಅಗತ್ಯಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮಸಾಲೆ ಪದಾರ್ಥಗಳನ್ನು ಖರೀದಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.



- ಅಕ್ಕಿ, ತುಪ್ಪ ಬಳಿಕ ಈಗ ಮಸಾಲೆ ಪದಾರ್ಥಗಳ ಬೆಲೆ ಏರಿಕೆ
- ಮೆಣಸಿನಕಾಯಿ, ಜೀರಿಗೆ, ಧನಿಯಾ, ಏಲಕ್ಕಿ ಸೇರಿ ಹಲವು ಮಸಾಲೆಗಳ ದರ ಗಗನಕ್ಕೇರಿಕೆ

Samyuktha Karnataka Pg.02

Kharif sowing trails last year's pace despite improved rains

NEW DELHI, DHNS: Farmers have sown kharif crops across 78.7 million hectares as of July 24, lagging behind the 82.6 million hectares covered during the same period last year.

According to the latest data from the Agriculture Ministry, though the overall sowing gap has narrowed in recent weeks following improved monsoon rainfall in several parts of the country, acreage under most major kharif crops—including paddy, pulses, oilseeds and cotton—remains below last year's levels. Uneven precipitation continues to affect planting in parts of eastern and central India.

The total area under pulses dropped to 8.4 million hectares, 690,000 hectares lower than last year. Sowing of arhar (tur) fell by 410,000 hectares, moongbean by 150,000 hectares, and mothbean by 260,000 hectares. Urdbean was the only pulse to register an increase, rising by 139,000 hectares to 1.86 million hectares.

Deccan Herald Pg.08

University Of Agricultural Sciences, Bangalore

NAAC A' Accredited, Estate Office, GKVK, Bengaluru-560 065

EO/SPO/e-Proc/6/2026-27 Date: 24-07-2026

TENDER NOTIFICATION
(Through Kpp Portal only)

The University of Agricultural Sciences, Bengaluru has invited Tender in the prescribed form as per the Standard tender document KG-1, from the reputed firms for the procurement of Equipment's. Blank Tender Documents can be downloaded from **kppp.karnataka.gov.in, Last date and time for uploading the tender on 05-08-2026 up to 4:00 p.m. The Technical bid will be opened on 07-08-2026 at 10:30 a.m. The Financial bid will be opened on 10-08-2026 at 10:30 a.m.** Help Desk-09240214000/09240214001 **support@eprochelpdesk.com.** The University reserves the right to accept or reject any or all the tenders without assigning any reasons.

Sd/-
ESTATE OFFICER

DIPR/CP/RO1844/AAPL/2026-27

The Hindu Pg. 06

Farmers in Kolar chop down mango trees as they face loss

The district accounts for around 60% of the State's total mango cultivation; around 42,000 to 45,000 hectares here is dedicated only for mango cultivation

Rashmi Patil
BENGALURU

Following huge losses incurred from the past three years, farmers in Kolar district have started chopping down old and new mango trees on their farmlands.

The farmers said that while they incurred losses growing mangoes on the one hand, they were unable to cultivate other crops along with mango trees as the sunlight does not reach the crops due to shade. Thus, they are unable to diversify as well.



The logs of mango trees being loaded onto a tractor, in Kolar district. SPECIAL ARRANGEMENT

Land of mangoes

Kolar district accounts for around 60% of the State's total mango cultivation. Around 42,000 to 45,000 hectares here are dedicated sfor mango cultivation.

T.V. Ramesh, a mango farmer, said, "I have chopped down mango trees in two-and-a-half-acre of my farm. Like me, there are many farmers who did the same on their two to five acres of land. I have made preparations to cultivate ragi this year. In the last two years, I have incurred huge losses because of growing varieties of mango, especially Totapuri. Forget earning profits, I will be happy if I get money spent on cultivation. If I continue to grow mangoes for one more year, then I will have to either stop farming and sell the land or end my life."

Murali Thotli, who cut down trees that were planted by his father in four-and-a-half-acre farmland, said, "I had cultivated mixed mango varieties including Benisha and Totapuri and both have brought only losses. While Totapuri's price is only ₹3 per kg, the yield of Benisha is not of good quality. The size of Benisha mango is smaller than usual, each fruit weighs around 300 gms to 500 gms. But this time, it is only 100 gms to 200 gms. It might be due to abrupt rains and changes in the weather and diseases that affected the crop," Mr. Murali said. He also added that he would either cultivate ragi and if good water was available, then he would cultivate vegetables like tomato, cabbage, brinjal and others.

He said, "Mango trees are huge and when we try to cultivate other crops along with them, sunlight doesn't reach these crops. In addition to this, if mango trees catch diseases, it was easily transferred to other crops during cultivation. Hence, mixed farming is not possible here."

Farmers are sending wooden logs of these trees to brick manufacturing units in and around Bengaluru. "This wood isn't so strong that it can be used to make furniture or other byproducts. Hence, farmers are selling them to brick manufacturing factories where they use this wood for burning bricks. Some farmers have given these wooden logs for free," he added.

S.R. Kumara Swamy, Deputy Director of Horticulture Department, Kolar district, expressed disappointment over farmers chopping down hundreds of mango trees. "The State government has tried to provide all sorts of assistance to the farmers. We urged the Centre to give support price as demanded by them. I understand the distress due to losses. But chopping down the trees cannot be the solution to this problem. Depending on the quantity, quality and demand, what if the price of these mangoes increase next year?" he asked.

The Hindu Pg. 06

ಕೃಷಿ ಮೇಳ ಮುಂದೂಡಿಕೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವತಿಯಿಂದ ಅಕ್ಟೋಬರ್ 15ರಿಂದ 18ರವರೆಗೆ ನಡೆಸಲು ಉದ್ದೇಶಿಸಿದ್ದ 'ಕೃಷಿ ಮೇಳ'ವನ್ನು ನವೆಂಬರ್‌ಗೆ ಮುಂದೂಡಲಾಗಿದೆ. ನ.12ರಿಂದ 15ರವರೆಗೆ ಮೇಳ ನಡೆಯಲಿದೆ. ಮುಂಗಾರು ಹಿನ್ನಡೆ ಹಾಗೂ ಬರುವ ದಿನಗಳಲ್ಲಿ ಮಳೆಯಾಗುವ ನಿರೀಕ್ಷೆ ಇರುವುದರಿಂದ ವಿವಿ ಕೃಷಿ ಮೇಳವನ್ನು ಮುಂದೂಡಿದೆ.ಮೇಳದಲ್ಲಿ ಮಳಿಗೆಗಳನ್ನು ಕಾಯ್ದಿರಿಸಲು ಕೊನೆಯ ದಿನಾಂಕವನ್ನು ಅ. 19ರವರೆಗೆ ವಿಸ್ತರಿಸಲಾಗಿದೆ. ನಾನಾ ಪ್ರಶಸ್ತಿಗಳಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಈ ಬಾರಿಯ ಕೃಷಿ ಮೇಳವನ್ನು 'ಮುಂದಿನ ಪೀಳಿಗೆಗೆ ವೈವಿಧ್ಯಮಯ ಕೃಷಿ' ಎಂಬ ಶೀರ್ಷಿಕೆಯಡಿ ಆಚರಿಸಲಾಗುತ್ತಿದೆ.

Vijaya Karnataka Pg. 04

ಮೀನು ರಫ್ತು: ಭಾರತ ಮಹತ್ಸಾಧನೆ

73 ಸಾವಿರ ಕೋಟಿ ರೂ. ಮೊತ್ತದ 19 ಲಕ್ಷ ಮೆಟ್ರಿಕ್ ಟನ್ ಮೀನು ರವಾನೆ

■ **ಮುಹಮ್ಮದ್ ಆರಿಫ್** ಮಂಗಳೂರು
mahammed.arif@timesofindia.com

ಮೀನು ರಫ್ತು ಮಾಡುವ ರಾಷ್ಟ್ರಗಳ ಪೈಕಿ ಭಾರತ ವಿಶ್ವದ ಐದು ರಾಷ್ಟ್ರಗಳಲ್ಲೊಂದಾಗಿದ್ದು, 2025-26ನೇ ಸಾಲಿನಲ್ಲಿ 73,890 ಕೋಟಿ ರೂ. ಮೊತ್ತದ 19.72 ಲಕ್ಷ ಮೆಟ್ರಿಕ್ ಟನ್‌ಗೂ ಹೆಚ್ಚು ಮೀನು ರವಾನಿಸುವ ಮೂಲಕ ಸಮುದ್ರಾಹಾರ ರಫ್ತಿನಲ್ಲಿ ದಾಖಲೆಯ ಗರಿಷ್ಠ ಮಟ್ಟ ತಲುಪಿದೆ.

ಶೀತಲೀಕೃತ ಸಿಗಡಿ ಪ್ರಮುಖ ರಫ್ತು ಉತ್ಪನ್ನವಾಗಿದ್ದು, ಗಳಿಕೆಯಲ್ಲಿ ಶೇ.66 ಸಿಂಹಪಾಲು ಪಡೆದರೆ, ಶೀತಲೀಕೃತ ಮೀನು, ಸ್ಕ್ವಿಡ್ ಮತ್ತು ಕಟ್ಲ್‌ಫಿಶ್ ಉಳಿದ ಸ್ಥಾನದಲ್ಲಿವೆ. ಅಮೆರಿಕ ಆತಿ ದೊಡ್ಡ ಆಮದು ಮಾರುಕಟ್ಟೆಯಾದರೆ, ನಂತರ ಸ್ಥಾನದಲ್ಲಿ ಚೀನಾ, ಯುರೋಪಿಯನ್ ಒಕ್ಕೂಟ, ಆಗ್ನೇಯ ಏಷ್ಯಾ ಮತ್ತು ಜಪಾನ್‌ಗಳಿವೆ.

ಮೀನು ರಫ್ತು ವಿವರ	
ವರ್ಷ	ಮೊತ್ತ ಕೋಟಿ ರೂ.
2021	57,586
2022	63,969
2023	61,043
2024	62,408
2025	62,408
2026	73,890

ಭಾರತದಲ್ಲಿ ವಾರ್ಷಿಕ ಸುಮಾರು 1.97 ಕೋಟಿ ಟನ್‌ಗೂ ಹೆಚ್ಚು ಮೀನು ಉತ್ಪಾದಿಸುತ್ತಿದೆ. ಅದರಲ್ಲಿ 35.70 ಲಕ್ಷ ಟನ್ ಸಮುದ್ರ ಮೀನುಗಾರಿಕೆ ಮತ್ತು 1.61 ಕೋಟಿ ಟನ್‌ಗೂ ಅಧಿಕ ಮೀನು ಕೃಷಿಯಿಂದ ದೊರೆಯುತ್ತದೆ. ಮೀನು ಕೃಷಿ ಕ್ಷೇತ್ರದಲ್ಲಿ ಭಾರತವು ವಿಶ್ವದಲ್ಲಿ ಎರಡನೇ ಸ್ಥಾನದಲ್ಲಿದ್ದು, ವಾರ್ಷಿಕ ಸುಮಾರು ಶೇ.8 ಬೆಳವಣಿಗೆ ದಾಖಲಿಸುತ್ತಿದೆ. ಭಾರತವು ಸುಮಾರು 75 ರಾಷ್ಟ್ರಗಳಿಗೆ ಮೀನು ಮತ್ತು ಮೀನು ಉತ್ಪನ್ನಗಳನ್ನು ರಫ್ತು ಮಾಡುತ್ತಿದ್ದು, ದೇಶದ ಕೃಷಿ ರಫ್ತಿನಲ್ಲಿ ಮೀನುಗಾರಿಕೆ ಪ್ರಮುಖ ಕೊಡುಗೆ ನೀಡುತ್ತಿದೆ.

ವಿಶ್ವ ಆರೋಗ್ಯ ಸಂಸ್ಥೆ ಶಿಫಾರಸಿನಂತೆ, ಪ್ರತಿಯೊಬ್ಬರಿಗೆ ವರ್ಷಕ್ಕೆ ಸರಾಸರಿ 23-24 ಕೆ.ಜಿ ಮೀನು ಲಭ್ಯವಾಗಬೇಕಿದ್ದು, ಭಾರತದಲ್ಲಿ ಸರಾಸರಿ ಲಭ್ಯತೆ ಸುಮಾರು 12.5 ಕೆ.ಜಿ ಇದೆ. ಇದು ದೇಶದಲ್ಲಿ ಮೀನು ಉತ್ಪಾದನೆ ಹಾಗೂ ಬಳಕೆಯನ್ನು ಇನ್ನಷ್ಟು ಹೆಚ್ಚಿಸುವ ಅಗತ್ಯವಿರುವುದನ್ನು ಸೂಚಿಸುತ್ತದೆ.

ಆಹಾರ ಜೀವವೈವಿಧ್ಯ: ದೇಶದಲ್ಲಿ ಸುಮಾರು 3,250 ಮೀನು ತಳಿಗಳು ದಾಖಲಾಗಿದ್ದು, ಉಪ್ಪುನೀರು, ಸಿಹಿನೀರು, ಕಿಂಚಿತ್ ಉಪ್ಪು ನೀರು ಹಾಗೂ ವಿವಿಧ ಜಲವಾಸ ಸ್ಥಳಗಳಲ್ಲಿ ವಾಸಿಸುವ ಅಪಾರ ಜೀವವೈವಿಧ್ಯವಿದೆ. ಮೀನುಗಾರಿಕೆ ಕ್ಷೇತ್ರ ಸುಮಾರು 2.80 ಕೋಟಿ ಜನರಿಗೆ ನೇರ ಹಾಗೂ ಪರೋಕ್ಷ ಜೀವನೋಪಾಯ ಒದಗಿಸುತ್ತಿದ್ದು, ದೇಶದ ಆರ್ಥಿಕ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡುತ್ತಿದೆ.

ರಾಜ್ಯದಲ್ಲೂ ಹೆಚ್ಚಳ ಅಗತ್ಯ: ಕರ್ನಾಟಕದಲ್ಲಿ 343 ಕಿ.ಮೀ. ಕರಾವಳಿ, ಸುಮಾರು 27 ಸಾವಿರ ಚದರ ಕಿ.ಮೀ. ಸಮುದ್ರ ಪ್ರದೇಶ, ಸಾವಿರಾರು ಯಾಂತ್ರಿಕ ಹಾಗೂ ಸಾಂಪ್ರದಾಯಿಕ ಮೀನುಗಾರಿಕಾ ಬೋಟ್‌ಗಳು, 82 ಜಲಾಶಯಗಳು, ಸಾವಿರಾರು ದೊಡ್ಡ ಹಾಗೂ ಸಣ್ಣ ಕೆರೆಗಳು ಮತ್ತು ಅಪಾರ ಜಲ ಸಂಪನ್ಮೂಲಗಳಿಂದ ಸುಮಾರು 5.70 ಲಕ್ಷ ಹೆಕ್ಟೇರ್ ಜಲವಿಸ್ತೀರ್ಣ ಹೊಂದಿದೆ. ಆದರೂ, ಈ ಸಂಪನ್ಮೂಲಗಳ ಪೂರ್ಣ ಪ್ರಮಾಣದ ಸದ್ಬಳಕೆ ಇನ್ನೂ ಸಾಧ್ಯವಾಗಿಲ್ಲ. ಪ್ರತಿ ಕೃಷಿ ಭೂಮಿಯ ಶೇ.1ರಿಂದ 5ರಷ್ಟು ಭಾಗವನ್ನು ಮೀನು ಕೃಷಿಗೆ ಮೀಸಲಿಟ್ಟರೆ ರೈತರಿಗೆ ಹೆಚ್ಚುವರಿ ಆದಾಯದ ಜತೆಗೆ ನೀರಿನ ಸಮರ್ಪಕ ಬಳಕೆ ಸಾಧ್ಯವಾಗುತ್ತದೆ. ಉಪ್ಪು ಮತ್ತು ಕ್ಷಾರಯುಕ್ತ ಭೂಮಿಗಳು, ಮಳೆನೀರು ಸಂಗ್ರಹಿಸುವ ಕೃಷಿ ಕೊಳಗಳು ಹಾಗೂ ಇಟ್ಟಿಗೆ ತಯಾರಿಕೆಯಿಂದ ನಿರ್ಮಾಣವಾದ ಗುಂಡಿಗಳನ್ನು ಕೂಡ ವೈಜ್ಞಾನಿಕ ರೀತಿಯಲ್ಲಿ ಮೀನು ಕೃಷಿಗೆ ಬಳಸಿಕೊಳ್ಳಬಹುದು ಎನ್ನುತ್ತಾರೆ ಮಂಗಳೂರು ಮೀನುಗಾರಿಕಾ ಕಾಲೇಜಿನ ಜಲಪರಿಸರ ನಿರ್ವಹಣಾ ವಿಭಾಗದ ಪ್ರಾಧ್ಯಾಪಕ ಡಾ.ಶಿವಕುಮಾರ್ ಮಗದ.

Vijaya Karnataka Pg. 05